ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1095 (1165)
ಸದಸ್ಯರ ಹೆಸರು	:	ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ಸಚಿವರು	:	ಕಂದಾಯ ಸಚಿವರು
ಉತ್ತರಿಸುವ ದಿನಾಂಕ	:	22.09.2021

****

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಮಡಿಕೇರಿ ತಾಲ್ಲೂಕು ಕರ್ಣಗೇರಿಯಲ್ಲಿ ಕಟ್ಟುತ್ತಿರುವ ಮಿನಿ ವಿಧಾನಸೌಧದ ಕಾಮಗಾರಿಯು ಯಾವ ವರ್ಷದಲ್ಲಿ ಪ್ರಾರಂಭವಾಯಿತು ಹಾಗೂ ಇದನ್ನು ಪೂರ್ಣಗೊಳಿಸಲು ಮಾಡಲಾದ ಅಂದಾಜು ಮೊತ್ತ ಎಷ್ಟು; ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಹಮ್ಮಿಕೊಂಡ ಕಾಲಮಿತಿ ಏನು; (ವಿವರ ನೀಡುವುದು)	ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಕರ್ಣಗೇರಿ ಗ್ರಾಮದ ಸರ್ವೆ ನಂ.382 ಮತ್ತು 383 ರಲ್ಲಿನ ಒಟ್ಟು 1 ಎಕರೆ 75 ಸೆಂಟ್ಸ್ ಜಾಗದಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ರೂ.500.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಮೊದಲನೇ ಹಂತದ ಕಟ್ಟಡವನ್ನು ನಿರ್ಮಿಸಲಾಗಿದೆ. ಸದರಿ ಕಟ್ಟಡವನ್ನು ನಿರ್ಮಿಸಲು ದಿನಾಂಕ:09.11.2017 ರಿಂದ 11 ತಿಂಗಳ ಕಾಲಾವಧಿಯನ್ನು ನಿಗಧಿಪಡಿಸಿ ಕಾಮಗಾರಿಯನ್ನು ಕೈಗೊಂಡು ಮುಕ್ತಾಯಗೊಳಿಸಲಾಗಿದೆ.
ಆ)	ಈ ಮಿನಿ ವಿಧಾನಸೌಧ 2ನೇ ಹಂತದ ಕಾಮಗಾರಿಯು ಇಲ್ಲಿಯವರೆಗೂ ಚಾಲನೆಯಾಗದಿರಲು ಕಾರಣಗಳೇನು;	ಮಡಿಕೇರಿ ತಾಲ್ಲೂಕು, ಮಿನಿ ವಿಧಾನಸೌಧ ಕಟ್ಟಡದ ಎರಡನೇ ಹಂತದ ಕಾಮಗಾರಿಯನ್ನು ರೂ.500.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ಸರ್ಕಾರದ ಆದೇಶ ಸಂಖ್ಯೆ: ಕಂಇ 25 ಡಬ್ಲ್ಯೂಬಿಆರ್ 2021 ದಿನಾಂಕ:08.06.2021 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಸದರಿ ಕಟ್ಟಡವನ್ನು ನುರಿತ ತಂತ್ರಜ್ಞಾನ ಬಳಸಿ ತಜ್ಞರ ಸಲಹೆ ಮೇರೆಗೆ ಕೈಗೊಳ್ಳಲಾಗಿದೆ. ಕರ್ನಾಟಕ ಗೃಹ ಮಂಡಳಿ ವತಿಯಿಂದ ಟೆಂಡರ್ ಕರೆದು ನಿಗಧಿತ ಕಾಲಾವಧಿಯಲ್ಲಿ ಕಾಮಗಾರಿಯನ್ನು ಮುಕ್ತಾಯಗೊಳಿಸಲು ಕ್ರಮವಹಿಸಲಾಗುವುದು.
ಇ)	ಈ 2ನೇ ಹಂತದ ಕಾಮಗಾರಿಯನ್ನು ಯಾವ ಕಾಲಮಿತಿಯಲ್ಲಿ ಕಾರ್ಯಾರಂಭ ಮಾಡಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು; ಕಾಲ ವಿಳಂಬವಾಗುತ್ತ ಹೋದ್ದಲ್ಲಿ ಅಪೂರ್ಣವಾಗಿರುವ ಈ ಕಟ್ಟಡದ ಸಾಮರ್ಥ್ಯ ಕುಸಿಯುವುದಿಲ್ಲವೇ; ಹಾಗಿದ್ದಲ್ಲಿ, ಇದಕ್ಕೆ ಯಾರನ್ನು ಹೊಣೆಗಾರಿಕೆಯನ್ನಾಗಿ ಮಾಡಲಾಗುವುದು? (ವಿವರ ನೀಡುವುದು)	

ಕಂಇ 120 ಡಬ್ಲ್ಯೂಬಿಆರ್ 2021

(ಆರ್. ಅಶೋಕ)
ಕಂದಾಯ ಸಚಿವರು.